

ಕಲೆ: ವಾಗೀಶ ಹೆಗಡೆ

# ಗೆಳತಿ...

ವಂಚನೆ ದ್ರೋಹ
ಸಮಯಸಾಧಕತನ
ಮುಂತಾದವು
ಈ ಲೋಕದ
ಮೂಲ ಧಾತುಗಳು

ಆದರದೇ ರೂಪಕ್ಕೆ
ಬೇಸರಿಸಿ
ಪಾರ್ಲರಿಗೆ
ಹೋಗಿ
ತೀಡಿಸಿಕೊಂಡು ಬಂದ
ಮೇಲೆ ಅವು
ನಂಬಿಕೆ ವಿಶ್ವಾಸ
ಬದ್ಧತೆಗಳೆಂಬ
ಸೌಮ್ಯ
ಪದಗಳಾಗಿ
ಬದಲಾಗಿ
ಹೋಗುತ್ತವೆ
ಕಾಲದ ಮಳೆ
ಕಾಯುವುದಿಲ್ಲ
ನೋಡು
ಯಾವುದಕ್ಕೂ
ಸುರಿದಾಗೆಲ್ಲ
ಬಣ್ಣ ಕರಗಿ
ಅಸಲು
ಪದಗಳು
ಕಂಗೊಳಿಸಿ
ಕಿಂಚಿತ್ತೂ
ಸಂಕೋಚವಿರದೆ
ಸಿಂಹಾಸನವೇರುತ್ತವೆ

ಒಳಗೊಂದು
ನೆಂದ ಹೃದಯ
ಹೊಂದಿರುವ
ನನ್ನಂತಹ
ಬಡಪ್ರೇಯಸಿಯರ
ಕೂಡೆ
ವಿಧಿಗೆ ಸಲುಗೆ
ತುಸು
ಹೆಚ್ಚೇ
ಎನಿಸುತ್ತದೆ.

ಕೊಡ ತುಂಬಿದಾಗೆಲ್ಲ
ಕಡಲು
ಮೊರೆಯುತ್ತದೆ
ಕೆನ್ನೆ ಮೇಲಿಷ್ಟು
ನವ್ಯಕಲೆ.
ಸಮಯ ನೋಡಿ
ಸಿಂಗರಿಸಿಕೊಂಡ
ಬಂದ
ಮತ್ತೊಂದು
ಮೂಲಪದ
ಹೆಗಲಾಗುತ್ತದೆ

ತಿಳಿದೂ
ಒರಗುತ್ತೇವೆ.

● ನಂದಿನಿ ಹೆದ್ದುರ್ಗ